


ವಾರಾಣಸಿಯಲ್ಲಿ ವೈಭವದ ಗಂಗಾ ಆರತಿ...

ಇಂದಿಗೂ ಅನೇಕ ಸಾಧು, ಸಂತರು ಸಾಧನೆಗಾಗಿ ಆಶ್ರಯಿಸುವುದು ದುರ್ಗಮ ಹಿಮಾಲಯವನ್ನೇ. ತನ್ನವರಿಂದಲೇ ಮೋಸಗೊಂಡು, ತಾನೇ ಕಟ್ಟಿ ಬೆಳೆಸಿದ ಕಂಪನಿಯಿಂದ ಹೊರ ನೂಕಿಸಿಕೊಂಡು ದಿಕ್ಕೆಟ್ಟು ಹಿಮಾಲಯವನ್ನು ಆಶ್ರಯಿಸಿ ಅಲ್ಲಿಂದ ಹಿಂತಿರುಗಿ ಬಂದು ಆಪಲ್ ಕಂಪನಿ ಕಟ್ಟಿದ ಸ್ಟೀವ್ ಜಾಬ್ಸ್‌ಗೆ ಜನರ ಸಂಪರ್ಕವೇ ಬೇಡವಾಗಿತ್ತು. ಇವು ಬರೀ ಬೆಟ್ಟ ಗುಡ್ಡಗಳೋ, ನದಿಗಳೋ ಅಲ್ಲ. ಅವುಗಳಲ್ಲಿ ಅಂತರ್ಗತವಾಗಿರುವ ಮೌನ, ಸಹನೆ, ಚಲನಶೀಲತೆ, ದೈವೀಕತೆ, ಪಾವಿತ್ರ್ಯ, ಅಗಾಧತೆ, ಅನನ್ಯತೆ, ಸವಾಲಾಗಿ ನಿಲ್ಲಬಲ್ಲ ದಿಟ್ಟತೆಗಳನ್ನು ಮನುಷ್ಯ ಅರ್ಥ ಮಾಡಿಕೊಳ್ಳದಿದ್ದರೆ ಅವನ ದೈವತ್ವದ ಹುಡುಕಾಟ ವ್ಯರ್ಥ. ಅಹಂ ಬ್ರಹ್ಮಾಸ್ಮಿ ಎಂದ ಶಂಕರರು, ದಾಸೋಹಂ ಎಂದ ಶರಣರು, ಬಯಲೊಳು ಆಲಯವನ್ನು, ಭಕ್ತರ ಆಣೆಯನ್ನೇ ಪ್ರಮಾಣವಾಗಿಸಿದ ದಾಸವರೇಣ್ಯರು, ಪರಿಪೂರ್ಣ ಶರಣಾಗತಿಯೇ ಭಕ್ತಿ ಎಂದ ಆಧುನಿಕ ಸಂತ ವಿವೇಕಾನಂದರು ಭಕ್ತಿಯ ಹಾದಿಯನ್ನು ನಿಚ್ಚಳವಾಗಿಸಿದ್ದಾರೆ. ಆದರೂ ನಾಗಾಲೋಟದ ಈ ದಶಕದಲ್ಲಿ ಭಕ್ತಿಯ ವ್ಯಾಖ್ಯೆ ಬೇರೆಯೇ ಆಗುತ್ತಿದೆ.

ವಾಹನ ಎಕ್ಸ್ಪೊ, ಐಟಿ ಎಕ್ಸ್ಪೊ, ರಿಯಲ್ ಎಸ್ಟೇಟ್ ಎಕ್ಸ್ಪೊ ನಡೆಯುವಂತೆ ಈಗ ದೇವಾಲಯ ಎಕ್ಸ್ಪೊಗಳು ನಡೆಯುತ್ತಿವೆ. ನೆರೆಯ ಆಂಧ್ರದಲ್ಲಿರುವ ಚಿಕ್ಕ, ದೊಡ್ಡ 27000 ದೇವಾಲಯಗಳಿಗೆ ಪ್ರತಿವರ್ಷ ಬರುವ ಭಕ್ತರ ಸಂಖ್ಯೆ 21 ಕೋಟಿ ಎಂದು ಅಲ್ಲಿನ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಹಣದ ಹರಿವಿರುವ ಎಲ್ಲಾ ಕ್ಷೇತ್ರಗಳೂ ಮೂಲ ಉದ್ದೇಶವನ್ನು ಕಳೆದುಕೊಳ್ಳುವುದಕ್ಕೆ ನಮ್ಮೆದುರು ಇರುವ ಒಳ್ಳೆಯ ನಿದರ್ಶನ ಶಿಕ್ಷಣ ವ್ಯವಸ್ಥೆ. ಇಂದು ಇದು ಪಕ್ಕಾ ವ್ಯಾಪಾರಿ ಸಂಸ್ಥೆ. ಅದರಂತೆ ಹಣದ ಹರಿವಿನ ಮೂಲಕ ಬೃಹತ್ ಉದ್ಯಮಗಳಾಗಿರುವ ದೇವಾಲಯಗಳು ಆ ಕಾರಣದಿಂದಲೇ ಪಾರದರ್ಶಕತೆಯನ್ನು ಕಳೆದುಕೊಳ್ಳಬಹುದಾದ ಅಪಾಯವಿದೆ.

ಒಮ್ಮೆ ಒಬ್ಬ ವೀಕ್ಷಕ ವಿವರಣೆಗಾರರು ಉದ್ಧರಿಸಿದ್ದ ಮಾತು ಇಲ್ಲಿ ನೆನಪಾಗುತ್ತಿದೆ. ‘ಎನ್ನ ಕಾಲೇ ಕಂಬ. ದೇಹವೇ ದೇಗುಲ ಅಂತಾರೆ. ಆದ್ರೆ ದೇವಾಲಯವೂ ಬೇಕಲ್ಲ!...’ ತಮ್ಮ ದೈವಭಕ್ತಿಯನ್ನು ಪ್ರದರ್ಶಿಸುವ ಹೊತ್ತಲ್ಲಿ ಅವರಿಗೆ ಇನ್ನೊಬ್ಬ ಭಕ್ತನಿಗೆ ನೋವುಂಟು ಮಾಡುತ್ತಿದ್ದೇನೆ ಎಂಬ ಕಡೆ ಗಮನವಾಗಲೀ ಅಥವಾ ಈ ಜಗತ್ತು ಕಂಡ ಅದ್ವಿತೀಯ ಸಮಾಜ ಉದ್ಧಾರಕ, ಸಾಂಸ್ಕೃತಿಕ ನಾಯಕನನ್ನು ಹೀಗಳೆಯುತ್ತಿದ್ದೇನೆ ಎಂಬ ಕನಿಷ್ಠ ಅರಿವಾಗಲಿ ಇದ್ದಂತಿರಲಿಲ್ಲ ಅಥವಾ ಒಂದೊಮ್ಮೆ ಇದ್ದರೂ ಒಬ್ಬ ದೇವನನ್ನು ಮೆರೆಸುವ ಭರದಲ್ಲಿ ಇನ್ನೊಬ್ಬ ದೇವನನ್ನು ಕೆಳಗಿಳಿಸುವ ಉದ್ದೇಶಪೂರಿತ ಹೀನ ಮನಸ್ಥಿತಿಯೂ ಆಗಿರಬಹುದು. ಇಲ್ಲಿ ಭಕ್ತಿಯ ಯಾವ ಪರಿಭಾಷೆ ಸರಿಹೊಂದುತ್ತದೆ ಎಂಬುದನ್ನು ಬಲ್ಲವರು ಹೇಳಬೇಕು.

ಇಂದು ದೇಶೀಯ ಅಥವಾ ವಿದೇಶೀಯ ಯಾವುದೇ ಪ್ರವಾಸ ಅಸಾಧ್ಯವಲ್ಲ. 2024ರಲ್ಲಿ ಭಾರತಕ್ಕೆ ಬಂದ ಅಂತಾರಾಷ್ಟ್ರೀಯ ಪ್ರವಾಸಿಗರು ಈ ಬೃಹತ್ ಉದ್ಯಮಕ್ಕೆ ಸುಮಾರು 3.1 ಟ್ರಿಲಿಯನ್ ವಹಿವಾಟು ನೀಡಿದ್ದರು ಎಂದು ಹೇಳುವ ಅಂಕಿಅಂಶಗಳನ್ನು ಕಂಡಾಗ ಇದರ ಅಗಾಧತೆಯ ಅರಿವಾಗುತ್ತದೆ. 2024ರಲ್ಲಿ ರಾಷ್ಟ್ರೀಯ ಜಿಡಿಪಿಗೆ ಪ್ರವಾಸೋದ್ಯಮದ ಕೊಡುಗೆ 231.6 ಬಿಲಿಯನ್ ಡಾಲರ್ ಆಗಿತ್ತು. 2022ರಲ್ಲಿ ಇದು 190 ಬಿಲಿಯನ್ ಡಾಲರ್ ಆಗಿದ್ದು ಕೇವಲ ಎರಡು ವರ್ಷಗಳಲ್ಲಿ ಆದ ಹೆಚ್ಚಳ ಗಮನಾರ್ಹ. 2032ರ ಹೊತ್ತಿಗೆ ಇದು 33 ಲಕ್ಷ ಕೋಟಿಗೂ ಮೀರಬಹುದಾಗಿದ್ದು, ಜಿಡಿಪಿಯ 7.2% ಆಗಬಹುದು ಎಂದು ಅಂದಾಜಿಸಲಾಗಿದೆ. 2024ರಲ್ಲಿ 46.5 ದಶಲಕ್ಷ ಉದ್ಯೋಗಗಳನ್ನು ಪ್ರವಾಸೋದ್ಯಮ ಸೃಷ್ಟಿಸಿದೆ ಎಂದು ಅಂಕಿಅಂಶಗಳು ಹೇಳುತ್ತವೆ.

ಭಾರತ ಈಗ ಪ್ರಪಂಚದ ನಾಲ್ಕನೇ ಅತಿ ದೊಡ್ಡ ಆರ್ಥಿಕ ಬಲಾಢ್ಯ ರಾಷ್ಟ್ರ. ಇಂಥ ತ್ವರಿತಗತಿಯ ಅಭಿವೃದ್ಧಿಯೊಂದಿಗೆ ಸೇರಿ ಹೋಗಿರುವ ಪ್ರಾಕೃತಿಕ ಒತ್ತಡ, ಜನಸಂಖ್ಯೆ, ಎಗ್ಗಿಲ್ಲದ ಪ್ರಕೃತಿಯ ಮೇಲಿನ ಪ್ರಹಾರ, ಅವೈಜ್ಞಾನಿಕ ರಸ್ತೆ, ರೈಲು ಮಾರ್ಗಗಳು, ಬಹುಸೂಕ್ಷ್ಮ ಹಿಮಾಲಯ ಶ್ರೇಣಿಗಳಲ್ಲಿ ರೈಲು, ರಸ್ತೆ, ರೋಪ್‌ವೇ, ಹೆಲಿಕಾಪ್ಟರ್ ಹಾರಾಟ, ಕಟ್ಟಡಗಳ ನಿರ್ಮಾಣ ಮೊದಲಾದ ಶರವೇಗದ ಬೆಳವಣಿಗೆಗಳು ಕಳೆದ ಮಳೆಗಾಲದಲ್ಲಿ ತಮ್ಮ ನೋವನ್ನು ತೋಡಿಕೊಂಡಿವೆ. ಬೆಟ್ಟಗುಡ್ಡಗಳನ್ನು ನುಂಗಿದ ನದಿಗಳು, ಪ್ರಾಣಗಳನ್ನು ಆಹುತಿ ಪಡೆದ ಬೆಟ್ಟಗಳು, ಬದುಕನ್ನು ಅಸ್ತವ್ಯಸ್ತವಾಗಿಸಿದ ಪ್ರಕೃತಿ ವಿಕೋಪ ಕಂಡು ದೊಂಬಿಯಾಗಿರುವ ಪ್ರವಾಸೋದ್ಯಮ ಎಚ್ಚೆತ್ತುಕೊಳ್ಳಲಿ. ಇಲ್ಲವಾದರೆ ಹಪಹಪಿಯ ಪ್ರವಾಸೋದ್ಯಮ ದೇಶದ ಜಿಡಿಪಿಗೆ ತನ್ನ ಕೊಡುಗೆಯನ್ನು ಹೆಚ್ಚಿಸುವುದರೊಂದಿಗೆ ಈ ನೆಲದ ಅಸ್ಮಿತೆಗೆ ಸಂಚಕಾರವಾಗಬಲ್ಲ ಎಲ್ಲ ಸಾಧ್ಯತೆಗಳನ್ನೂ ಪ್ರದರ್ಶಿಸುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in